ಕೊಟ್ಟಿದೀನಲ್ವಾ?' ಮಾತು ಬದಲಿಸಿದಳು ಶೀಲಾ.

'ನಾನು ಮರೆತ್ರೂ ನೀನು ಮರೀಬೇಕಲ್ಲ? ಹೊತ್ತಿಗೆ ಸರಿಯಾಗಿ ಎಲ್ಲಾ ಸೇವೇನೂ ನಡೀತಿರುತ್ತೆ. ಯಾವ ಜನ್ಮದಲ್ಲಿ ಏನು ಪುಣ್ಯ ಮಾಡಿದ್ನೋ?' ಈ ಮಾತು ಹೃದಯಾಂತರಾಳದ್ದಾಗಿತ್ತೇ ವಿನಾ ತುದಿನಾಲಿಗೆಯದಾಗಿರಲಿಲ್ಲ ಅನ್ನುವುದು ಹೇಳಿದವರಿಗೆ, ಕೇಳಿದವರಿಗೆ ಇಬ್ಬರಿಗೂ ಗೊತ್ತಿತ್ತು. ಮಾವ, ಸೊಸೆಯ ಬಾಂಧವ್ಯ ಅನ್ನುವುದು ಅಷ್ಟು ಬೆಸೆದುಕೊಂಡಿತ್ತು.

* * *

ಶ್ರಮ ಸಾರ್ಥಕವಾಯಿತೆಂಬಂತೆ ವಾಸಕ್ಕೆ ಮನೆಗಳು ಸಿದ್ಧವಾದವು. ಮುಕ್ತಾಯದ ಹಂತದಲ್ಲೇ ಬಾಡಿಗೆಗೆ ಕೇಳಿಕೊಂಡು ಬರತೊಡಗಿದ್ದರು ಜನ. ಎಲ್ಲಾ ಅನುಕೂಲಗಳೂ ಕೈಯಳವಿನಲ್ಲಿರುವ ಪ್ರತಿಷ್ಠಿತ ಬಡಾವಣೆ. ಸ್ಕೂಲು, ಕಾಲೇಜು, ಬಸ್ ಸ್ಟಾಪು, ಮಾಲ್‌ಗಳು, ಆಸ್ಪತ್ರೆಗಳು, ಉದ್ಯಾನವನ, ದೇವಸ್ಥಾನ ಯಾವುದುಂಟು? ಯಾವುದಿಲ್ಲ? ಸನಿಹದ ಸ್ಕೂಲಿಗೆ ಮೊಮ್ಮಗ ದಾಖಲಾಗಿದ್ದ. ಹೆಚ್ಚೂ ಕಮ್ಮಿ ಕೈಖಾಲಿಯಾಗಿದ್ದರೂ ಇದೀಗ ದುಡ್ಡು ಬಾಚಿಕೊಳ್ಳುವ ಸಮಯ. ಶೀಲಾಳ ಸಂಭ್ರಮ ಮುಗಿಲು ಮುಟ್ಟಿತ್ತು. ವಾಸ್ತವವಾದಿ ಅವಳು. ಮಾವನೊಡನೆ ಹೇಳಿದ್ದಳು,

'ಗೃಹಪ್ರವೇಶ ಅಂತ ಆಡಂಬರ ಮಾಡೋದು ಬೇಡ ಮಾವ. ಹೊಸ ಮನೆ ಆದ್ರೂ ಹಳೆ ಮನೆ ಮೇಲೆ ಕಟ್ಸಿದ್ದಲ್ವಾ? ಶಾಸ್ತ್ರಕ್ಕೆ ಒಂದು ಸತ್ಯನಾರಾಯಣ ಪೂಜೆ ಮಾಡಿಸೋಣ. ಆಮೇಲೆ ಬಾಡಿಗೆಗೆ ಕೊಟ್ರಾಯ್ತು'.

'ಅಕ್ಕಪಕ್ಕದೋರನ್ನಾದ್ರೂ ಕರೀಬೇಡ್ವೇನೇ? ಎಲ್ಲಾ ಗುರುತಾಗಿದಾರೆ. ನೆಂಟರಿಷ್ಟ್ರು?'

'ಒಬ್ರನ್ನ ಕರೆದು ಮತ್ತೊಬ್ರನ್ನ ಬಿಟ್ರೆ ಚೆನ್ನಾಗಿರಲ್ಲ. ಹಾಗೆ ಕರೀತಾ ಹೋದ್ರೆ ನೂರಾರು ಜನ ಆಗುತ್ತೆ. ಖರ್ಚಿನ ಮೇಲೆ ಖರ್ಚು...'

'.......'

'ನಾ ಹೇಳ್ತೀನಿ ಕೇಳಿ, ಯಾರನ್ನೂ ಕರೆಯೋದು ಬೇಡ'.

'ನಿಮ್ಮಪ್ಪನ ಮನೆಯೋರನ್ನಾದ್ರೂ ಕರೀಬೇಕು ಕಣೇ...'

'ಅಯ್ಯೋ, ಅವರೇನು ಹೊರಗಿನವರಾ? ಕರೆಯೋಕೇನಿದೆ? ಬರ್ತಾರೆ ಅವರೇ...'

ಚಿದಾನಂದನಿಗೂ ಒಪ್ಪಿತವಾಗಿತ್ತು ಸೊಸೆಯ ಮಾತು. ಜನರನ್ನು ಗುಡ್ಡೆ ಹಾಕಿಕೊಂಡು, ಉಪಚಾರ ಹೇಳಿಕೊಂಡು, ಓಡಾಡುವುದು ವೃಥಾ ಶ್ರಮ ಅನಿಸತೊಡಗಿತ್ತು. ವರ್ಷಾನುಗಟ್ಟಲೆಯ ರಗಳೆ ಮುಗಿದು ಇನ್ನಾದರೂ ಹಾಯಾಗಿರಬಹುದೆನ್ನುವ ಯೋಚನೆಯಿಂದ ನೆಮ್ಮದಿಯೆನಿಸುತ್ತಿತ್ತು ಮನಸ್ಸಿಗೆ.

ಸರಳವಾಗಿ ನಡೆಯಿತು ಗೃಹಪ್ರವೇಶ ಕಾರ್ಯಕ್ರಮ. ಹೊಸ ಮನೆಗಳಿಗೆ ಸಂಸಾರಗಳು ಬಂದು ನೆಲೆಯೂರಿದುವು. ಅಡ್ವಾನ್ಸ್ ಹಣವೇ ಕೈತುಂಬಾ ಹರಿದು ಬಂದು ಚಿದಾನಂದನಿಗೆ ತನ್ನ ನಿರ್ಧಾರ ಕೈಕೊಡಲಿಲ್ಲ ಎನ್ನುವ ಸಮಾಧಾನ. ಹೀಗೊಂದು ಯೋಚನೆಯನ್ನು ತಲೆಗೆ ತುಂಬಿದ ಸೊಸೆಯ ಬಗ್ಗೆ ಅಭಿಮಾನ. ಮೊದಲ ತಿಂಗಳ ಬಾಡಿಗೆ ಹಣವನ್ನು

